
# ಖಾದಿಯನ್ನು ಜನಪ್ರಿಯಗೊಳಿಸುವ ಕನಸು

ಬೆಂಗಳೂರಿನ ಖಾದಿ ವಸ್ತ್ರವಿನ್ಯಾಸಕಿ, ವರ್ಧನ್ ಕ್ರಿಯೇಶನ್‌ನ ಒಡತಿ ಪಿ.ಜೆ. ನಿವೇದಿತಾ ಅವರ ಆಶಯ.



ಪಿ.ಜೆ. ನಿವೇದಿತಾ ಮೂಲತಃ ಮೈಸೂರಿನವರು. ಹುಟ್ಟೂರಿನಲ್ಲೇ ವಸ್ತ್ರವಿನ್ಯಾಸದಲ್ಲಿ ಪದವಿ ಪಡೆದು ಬೆಂಗಳೂರಿನಲ್ಲಿ ವರ್ಧನ್ ಕ್ರಿಯೇಷನ್ಸ್ ಎಂಬ ಬ್ಯೂಟಿಕ್ ನಿರ್ಮಿಸಿದವರು. ಖಾದಿಯಲ್ಲಿ ಹೊಸದೇನಾದರೂ ಮಾಡಬೇಕು ಎಂಬುದು ನಿವೇದಿತಾ ಕನಸು. ಇದನ್ನು ಸಾಕಾರಗೊಳಿಸಿ ಖಾದಿಯಲ್ಲಿ ವಿಶೇಷವಾಗಿ ಎಂಬ್ರಾಯಿಡರಿ ಪರಿಕಲ್ಪನೆಯನ್ನು ತಂದರು. ಖಾದಿ ಬಟ್ಟೆಯ ರವಿಕೆ ಮೇಲೆ ಗಂಡಭೇರುಂಡ ಚಿತ್ರ ಎಂಬ್ರಾಯಿಡರಿ ಮಾಡಿದ್ದು, ಇದು ಅನೇಕ ಸೆಲೆಬ್ರಿಟಿ, ಸಿನಿ ತಾರೆಯರನ್ನು ಸೆಳೆದಿದೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಸಲುವಾಗಿ ಖಾದಿ ಬಟ್ಟೆಯಲ್ಲಿ ಹೊಸ ಬಗೆಯ ವಿನ್ಯಾಸಗಳನ್ನು ಮಾಡಿ 'ಖಾದಿ ಟ್ರೆಂಡ್' ಸೃಷ್ಟಿಸಿರುವ ನಿವೇದಿತಾ 'ಸುಧಾ'ಕ್ಕೆ ಸಂದರ್ಶನ ನೀಡಿದ್ದಾರೆ.

- **ಖಾದಿಯಲ್ಲಿ ನೀವು ಫ್ಯಾಷನ್ ಡಿಸೈನಿಂಗ್ ಆರಂಭಿಸಿದ್ದು ಯಾವಾಗ?**

ನಾನು ಖಾದಿ ಬಟ್ಟೆ ಮೇಲೆ ವಿನ್ಯಾಸ ಮಾಡಲಾರಂಭಿಸಿ ಹಲವು ವರ್ಷಗಳೇ ಕಳೆದಿವೆ. ಆದರೆ ಆಗ ಖಾದಿ ಬಟ್ಟೆಗೆ ಬೇಡಿಕೆಯೇ ಇರಲಿಲ್ಲ. ಈಗೀಗ ಖಾದಿಯ ಗುಣಮಟ್ಟ, ತೊಟ್ಟರೆ ಆಗುವ ಹಿತಾನುಭವ ಹಾಗೂ ಫ್ಯಾಷನ್‌ಗೆ ಆತುಕೊಂಡಿರುವುದನ್ನು ನೋಡಿ ಫ್ಯಾಷನ್‌ಪ್ರಿಯರು ಖಾದಿ ಉಡುಗೆ ಇಷ್ಟಪಡಲಾರಂಭಿಸಿದ್ದಾರೆ. ಈಗ ಖಾದಿ ಫ್ಯಾಷನ್‌ಗೆ ಬಹಳ ಬೇಡಿಕೆ ಬಂದಿದೆ. ಕಾಲೇಜು ಯುವತಿಯರು ಕೂಡ ಖಾದಿ ಬಟ್ಟೆ ತೊಡಲಾರಂಭಿಸಿದ್ದಾರೆ. ಸೀರೆ, ಸಲ್ವಾರ್, ಕುರ್ತಿ ಎಲ್ಲವೂ ಖಾದಿಯಿಂದಲೇ ತಯಾರಿಸಿದ್ದು ಬೇಕು ಎಂದು ಹುಡುಕಿಕೊಂಡು ಬರುತ್ತಾರೆ.

- **ನೀವು ಯಾವ್ಯಾವ ವಿನ್ಯಾಸ ಮಾಡುತ್ತೀರಿ?**

ಬೆಂಗಳೂರಿನ ಜಯನಗರದಲ್ಲಿ ವರ್ಧನ್ ಕ್ರಿಯೇಷನ್ಸ್ ಎಂಬ ಬ್ಯೂಟಿಕ್ ಹುಟ್ಟುಹಾಕಿದ್ದೇನೆ. ಇಲ್ಲಿ ಐವರು ವಸ್ತ್ರವಿನ್ಯಾಸಗಾರರಿದ್ದೇವೆ. ಖಾದಿ ಬಟ್ಟೆ ಮೇಲೆ ಎಂಬ್ರಾಯಿಡರಿ, ಪಾಶ್ಚಾತ್ಯ ಮಾದರಿಯ ಉಡುಗೆ, ಸಾಂಪ್ರದಾಯಿಕ ವಿನ್ಯಾಸ ಇತ್ಯಾದಿ ಮಾಡುತ್ತೇವೆ. ಇವಲ್ಲದೆ ಶಾಲಾ ಮಕ್ಕಳಲ್ಲಿ ದೇಸಿ ಉಡುಗೆ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ವಿದ್ಯಾರ್ಥಿಗಳಿಗೂ ಯುನಿಫಾರ್ಮ್ ಹೊಲಿದು ಕೊಡುತ್ತೇವೆ. ಇದಕ್ಕಾಗಿ ಬೆಂಗಳೂರಿನ ಹೊರವಲಯದಲ್ಲಿ ಎರಡು ಬಟ್ಟೆ ತಯಾರಿಕಾ ಘಟಕ ಸ್ಥಾಪನೆ ಮಾಡಿದ್ದು ಸುಮಾರು 200 ಮಂದಿ ವಸ್ತ್ರವಿನ್ಯಾಸಕರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ಖಾದಿ ಸೀರೆ ಮೇಲೆ ವಿವಿಧ ವಿನ್ಯಾಸ, ಗೌನ್, ಕುರ್ತಿ, ಟಾಪ್, ಪುರುಷರ ಶರ್ಟ್, ಮಕ್ಕಳಿಗಾಗಿ ಉಡುಪು, ಲೆಹಂಗಾ, ಹಾಫ್‌ಸಾರಿ, ಮಕ್ಕಳಿಗಾಗಿ ಕುರ್ತಿ, ಧೋತಿ... ಮುಂತಾದವುಗಳ ತಯಾರಿ ಮಾಡುತ್ತೇವೆ.

- **ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ ನಿಮ್ಮ ಖಾದಿ ಬಟ್ಟೆ ಪ್ರಚಾರ, ಪ್ರೇರೇಪಣೆಗಳಿಂದ ಸಾಕಾರಗೊಳ್ಳುವುದೇ?**

ವಿದೇಶಿ ವಸ್ತುಗಳನ್ನು ತ್ಯಜಿಸಿ ನಮ್ಮ ದೇಶದಲ್ಲೇ ತಯಾರಾದ ಉಡುಗೆ ಧರಿಸಬೇಕು. ಅದರಲ್ಲೂ ಶುದ್ಧ ತಾಜಾ ಹತ್ತಿಯಿಂದ ತಯಾರಿಸಿದ ಬಟ್ಟೆ ತೊಡಬೇಕು ಎಂಬುದು ಗಾಂಧೀಜಿಯವರ ವಾದ. ಸದ್ಯ ಕೋವಿಡ್ ಭೀತಿ, ಆರ್ಥಿಕ ಅಡಚಣೆ ಇರುವುದರಿಂದ ದುಬಾರಿ ಬಟ್ಟೆ ಖರೀದಿಸಲು ಮಧ್ಯಮ ವರ್ಗದವರಿಗೆ ಸಾಧ್ಯವಿಲ್ಲ. ಹೀಗಾಗಿ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಉತ್ಪನ್ನ ಒದಗಿಸಿ ಸ್ವಲ್ಪ ಮಟ್ಟಿಗಾದರೂ 'ದೇಸೀಯತೆ'ಗೆ ಒತ್ತುಕೊಡಬೇಕೆಂಬ ಅಭಿಲಾಷೆ ನಮ್ಮದು.

- **ಖಾದಿ ವಿನ್ಯಾಸವಲ್ಲದೆ ಸಮಾಜಸೇವೆ ಏನಾದರೂ ಮಾಡುತ್ತಿದ್ದೀರಾ?**

ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್‌ನ ಮಾಜಿ ಅಧ್ಯಕ್ಷೆ. ವಿವಿಧ ಸಂಘ ಸಂಸ್ಥೆಗಳ ಮೂಲಕ ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಭೇಟಿ ನೀಡಿ ಸಹಾಯ ಮಾಡುವುದು, ಕ್ಯಾನ್ಸರ್‌ಪೀಡಿತರಿಗೆ ಸಾಂತ್ವನ ನೀಡುವುದು, ಬಡ ಮಕ್ಕಳಿಗೆ ಪುಸ್ತಕ ಒದಗಿಸುವುದು, ಬಡ ಕಲಾವಿದರಿಗೆ ಚಿತ್ರಕಲಾ ಸಾಮಗ್ರಿಗಳನ್ನು ನೀಡಿ ಪ್ರೋತ್ಸಾಹ ನೀಡುವುದು... ಇವೇ ಮುಂತಾದ ಕೆಲಸಗಳಲ್ಲಿ ಸಕ್ರಿಯಳಾಗಿರುವೆ.



## ಖಾದಿಯಲ್ಲಿ ಡಿಸೈನಿಂಗ್ ಬ್ಲೌಸ್

ಹೊನ್ನಿನ ಹೊಳಪಿನ ಅಂಚಿರುವ ರೇಷ್ಮೆಸೀರೆ ತೊಟ್ಟರೆ ಎಂಬ್ರಾಯಿಡರಿ ಬ್ಲೌಸ್ ಸಖತ್ ಲುಕ್ ಕೊಡುವಂಥದ್ದು. ಇದಕ್ಕೆ ಕುಂದನ್, ಜರ್ದೋಸಿಯಂತಹ ವರ್ಕ್ ಇದ್ದರಂತೂ ರವಿಕೆಯ ಲುಕ್ ಇಮ್ಮಡಿ. ಇದೇ ಪರಿಕಲ್ಪನೆಯಲ್ಲಿ ಖಾದಿ ಬ್ಲೌಸ್‌ನಲ್ಲಿ ಮಾಡಿದರೆ? ಇಂತಹ ಆಲೋಚನೆ ಬಂದದ್ದೇ ತಡ ರೇಷ್ಮೆ ಸೀರೆ ಡಿಸೈನಿಂಗ್ ರವಿಕೆಯ ಟ್ರೆಂಡ್ ಅನ್ನು ಖಾದಿಯಲ್ಲಿ ಒಡಮೂಡಿಸಿದ್ದು ನಿವೇದಿತಾ ಅಗ್ಗಳಿಕೆ. 'ಈ ಬ್ಲೌಸ್ ವಿನ್ಯಾಸ ಮಾಡುವಾಗ ಬ್ಲೌಸ್ ಬೆನ್ನಿನ ಭಾಗ ಹಾಗೂ ತೋಳಿನಲ್ಲಿ ಗಂಡಬೇರುಂಢ ಹಾಗೂ ನವಿಲಿನ ವಿನ್ಯಾಸ ಮಾಡಿದ್ದೇವೆ. ನವಿಲು ನಮ್ಮ ರಾಷ್ಟ್ರಪಕ್ಷಿ ಹಾಗೂ ಗಂಡಭೇರುಂಡ ಮೈಸೂರು ಅರಸರ ಲಾಂಛನ. ಈ ಎಂಬ್ರಾಯ್ಡರಿ ವಿನ್ಯಾಸವನ್ನು ಕೈಯಿಂದಲೇ ಮಾಡಲಾಗುತ್ತದೆ. ಇದರ ಮೇಲೆ ಮುತ್ತು, ಕುಂದನ್ ಹರಳುಗಳನ್ನು ಬಳಸಿದರಂತೂ ರಾಯಲ್ ಲುಕ್ ಕೊಡುವುದರಲ್ಲಿ ಸಂಶಯವೇ ಇಲ್ಲ' ಎಂಬುದು ನಿವೇದಿತಾ ಅಭಿಪ್ರಾಯ.

ಖಾದಿ ಸೀರೆಗಳು ನೋಡಲು ಸುಂದರ, ಧರಿಸಲು ಆರಾಮದಾಯಕ. ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ, ಪಾರ್ಟಿ, ರಿಸೆಪ್ಶನ್‌ಗಳಂತಹ ಕಾರ್ಯಕ್ರಮಗಳಿಗೂ ಸೈ ಎನಿಸಿಕೊಳ್ಳುತ್ತವೆ ಈ ಖಾದಿ ಉಡುಗೆಗಳು.

ರಾಷ್ಟ್ರೀಯ ಹಬ್ಬದ ಸಮಯದಲ್ಲಿ ಮಾತ್ರ ತೊಡುತ್ತಿದ್ದ ಖಾದಿ ಉಡುಗೆ ಇದೀಗ ದಿನನಿತ್ಯದ ಉಡುಗೆಯಾಗಿ ಮಾರ್ಪಾಡಾಗಿದೆ. ಮಾಡೆಲಿಂಗ್ ತಾರೆಯರು, ಸೆಲೆಬ್ರಿಟಿ ಸಿನಿನಟಿಯರಿಂದ ಹಿಡಿದು ಸಾಮಾನ್ಯ ಮಹಿಳೆಯರವರೆಗೂ ಖಾದಿ ಬಟ್ಟೆ ಟ್ರೆಂಡ್ ಸೃಷ್ಟಿಸಿದೆ. ಶಾರ್ಟ್ಸ್, ಸ್ಕರ್ಟ್ಸ್, ಸ್ಲೀವ್‌ಲೆಸ್ ಎಲ್ಲಾ ಬಗೆಯಲ್ಲಿ ಖಾದಿ ಉಡುಪುಗಳು ಈಗ ಲಭ್ಯ. ಬರೀ ಪೈಜಾಮ, ಕುರ್ತಿಗಳಿಗೆ ಮಾತ್ರ ಮೀಸಲಾಗಿದ್ದ ಖಾದಿ ಬಟ್ಟೆಗಳು ಸೀರೆ, ಶರ್ಟ್, ಪೈಜಾಮ, ಪರ್ಸ್, ಬ್ಯಾಗ್, ಖಾದಿ ದುಪಟ್ಟಾ, ಟಾಪ್ ರೂಪದಲ್ಲಿ ಲಭ್ಯ. ಸಣ್ಣಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲ ವಯೋಮಾನದವರಿಗೂ ಬೇಕಾದ ಟ್ರೆಂಡಿ ಫ್ಯಾಷನಬಲ್ ಉಡುಪುಗಳ ವಿನ್ಯಾಸ ಖಾದಿ ಬಟ್ಟೆಯಲ್ಲೀಗ ಸಿಗುತ್ತದೆ.

ಸಾಮಾನ್ಯವಾಗಿ ಖಾದಿ ಉಡುಪು ತಿಳಿ ಬಣ್ಣಗಳಲ್ಲಿಯೇ ಸಿಗುವುದು, ಬಿಳಿ, ತಿಳಿನೀಲಿ, ಆಕಾಶ ನೀಲಿ, ತಿಳಿ ಹಸಿರು, ಕೆನೆ ಬಣ್ಣ... ಹೀಗೆ ಕಣ್ಣಿಗೆ ಹಿತವೆನಿಸುವ ಬಣ್ಣಗಳಲ್ಲಿ ಹೆಚ್ಚು ಲಭ್ಯ. ಹಾಗೇ ಈಗ ಮಿಕ್ಸ್ ಆ್ಯಂಡ್ ಮ್ಯಾಚ್ ಪರಿಕಲ್ಪನೆಯೂ ಇಲ್ಲಿ ಜೀವಂತ! ಖಾದಿಯನ್ನು ಕೈಮಗ್ಗದಲ್ಲಿ ಮಾಡುವುದರಿಂದ ಒಳ್ಳೆಯ ಲುಕ್ ಅನ್ನೂ ಕೊಟ್ಟು 'ಪರಿಸರಸ್ನೇಹಿ'ಯೂ ಆಗಿದೆ. ಇದು ಹತ್ತಿಯಂತಹ ಸಾವಯವ ವಸ್ತುವಿನಿಂದ ತಯಾರಾಗುವುದರಿಂದ ದೀರ್ಘಕಾಲ ಬಾಳಿಕೆಯೂ ಬರುತ್ತದೆ, ನಮ್ಮ ದೇಶದ ಹವಾಮಾನಕ್ಕೆ ಸೂಕ್ತವಾದದ್ದೂ ಹೌದು. ಬೇಸಿಗೆಯಲ್ಲಿ ತಂಪಾದ ಅನುಭವ ನೀಡಿದರೆ, ಚಳಿಯಲ್ಲಿ ಬೆಚ್ಚಗೆ ಅನುಭವ ನೀಡಿ ಹಿತವೆನಿಸುತ್ತದೆ. ■